ಸಾಕ್ಷಿಯ ಹೆಸರುಃ ರಾಜೇಗೌಡ

ದಿನಾಂಕಃ **19-10-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಟಿ.ಜಿ. ವಕೀಲರಿಂದಃ

ಇದೇ ನ್ಯಾಯಾಲಯದಲ್ಲಿ ಪ್ರತಿವಾದಿಯರು ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ:07/2013 ರಂತೆ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಸರ್ವೆ ನಂ.229/1 ರಲ್ಲಿನ ಪೋಡು ವ್ಯತ್ಯಾಸವಾಗಿದೆ ಎಂದು ದಾಖಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ವಿಚಾರಣೆಗೆ ಹಾಜರಾಗಿದ್ದೆ ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ:07/2013 ಸರ್ವೆ ನಂ.229/1 ರಲ್ಲಿನ ಎರಡು ಎಕರೆ ಜಮೀನು ಈ ಕೇಸಿನ ಪ್ರತಿವಾದಿಗೆ ಸೇರಿರುತ್ತದೆ ಎಂದು ಘೋಷಣಾ ಆದೇಶವಾಗಿರುತ್ತದ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಈ ಆದೇಶದ ಮೇಲೆ ನಾನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಅದೇ ಸರ್ವೆ ನಂ.229/1 ನ್ನು ದಾವಾ ಷೆಡ್ಯೂಲ್ ಸ್ವತ್ತು ಎಂದು ತೋರಿಸಿ ಅದಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ:07/2013 ರಲ್ಲಿ ನಾನು ಸಲ್ಲಿಸಿದ ದಾಖಲೆಗಳನ್ನೇ ಈ ಕೇಸಿನಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ.

2) ಅಸಲು ದಾವಾ ಸಂಖ್ಯೆ:07/2013 ರಲ್ಲಿನ ವಾದಿಗಳು ಸರ್ವೆ ನಂ.229/1 ರಲ್ಲಿನ ಎರಡು ಎಕರೆ ಜಮೀನಿಗೆ ಪೂರ್ವಕ್ಕೆ ಬೋರಣ್ಣ ಕಟ್ಟೆ, ಪಶ್ಚಿಮಕ್ಕೆ ನನ್ನ ಹಾಗೂ ಚಿಕ್ಕೇಗೌಡರ ಜಮೀನು, ಉತ್ತರಕ್ಕೆ ಚಿಕ್ಕೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮದೇ ಜಮೀನು ಇದೆ ಎಂದು ನಮೂದಿಸಿದರು ಎಂದರೆ ಸಾಕ್ಷಿ ಉತ್ತರಕ್ಕೆ ಗೊತ್ತಿಲ್ಲ ಎನ್ನುತ್ತಾರೆ. ಈ ಸ್ವತ್ತಿನಲ್ಲಿ ಹಾಗೂ ಈ ಚೆಕ್ಕುಬಂದಿಯ ಮಧ್ಯದಲ್ಲಿರುವ ಸ್ವತ್ತಿನ ಸ್ವಾಧೀನವನ್ನು ಈ ದಾವೆಯ ಪ್ರತಿವಾದಿಯರು ಹೊಂದಿರುತ್ತಾರೆ ಎಂದರೆ ಸಾಕ್ಷಿ ನಾವು ಸ್ವಾಧೀನವನ್ನು ಹೊಂದಿರುತ್ತೇವೆ ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ:07/2013 ರಲ್ಲಿ ನ್ಯಾಯಾಲಯದಲ್ಲಿ ನಿಯೋಗಿಯನ್ನು ನೇಮಿಸಿ ಸರ್ವೆಯನ್ನು ಮಾಡಿಸಲಾಗಿತ್ತು ಎಂದರೆ ಸಾಕ್ಷಿ ನಾನು ಹೋಗಿಲ್ಲ ಎನ್ನುತ್ತಾರೆ. ನ್ಯಾಯಾಲಯದ ನಿಯೋಗಿ ಈ ದಾವೆಯ ಪ್ರತಿವಾದಿಗಳೇ ಮೇಲ್ಕಾಣಿಸಿದ ಜಮೀನಿನ ಸ್ವಾಧೀನದಲ್ಲಿದ್ದಾರೆ ಎಂದು ವರದಿ

ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 07/2013 ರಲ್ಲಿ ನಾವು ಏನು ತಕರಾರು ಸಲ್ಲಿಸಿದ್ದೆವು ಎಂದು ಕೇಳಿ ತಿಳಿದುಕೊಂಡಿಲ್ಲ. ಅಸಲು ದಾವಾ ಸಂಖ್ಯೆ 07/2013 ರಲ್ಲಿ ಸರ್ವೆ ನಂ.229/1 ರಲ್ಲಿನ 2 ಎಕರೆ ಜಮೀನಿಗೆ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ನಮ್ಮದೇ ಜಮೀನು ಇದೆ ಎಂದು ತೋರಿಸಿಕೊಂಡಿರುತ್ತೇವೆ ಎಂದರೆ ಸರಿ.

3) ಸರ್ವೆ ನಂ.229/1 ರಲ್ಲಿನ 2 ಎಕರೆ ಜಮೀನನ್ನು 1966 ರಲ್ಲಿ ಸಣ್ಣಪ್ಪರವರಿಂದ ದಾಸೇಗೌಡರು ಕ್ರಯಕ್ಕೆ ಕೊಂಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಈ ಎರಡು ಎಕರೆ ಜಮೀನಿನ ಪೂರ್ವಕ್ಕೆ ಸಣ್ಣಪ್ಪರವರ ಜಮೀನು, ಪಶ್ಚಿಮಕ್ಕೆ ದಾಸೇಗೌಡರ ಜಮೀನು ನಮೂದಿಸಿರುತ್ತಾರೆ ಎಂದರೆ ಸರಿ. ಈ ಕ್ರಯಪತ್ರದಲ್ಲಿ ಉತ್ತರಕ್ಕೆ ಕೆಂಪುಕೋಣೆ ಜವರ ರವರ ಜಮೀನು ಮತ್ತು ದಕ್ಷಿಣಕ್ಕೆ ಅದೇ ದಿನ ನನ್ನ ತಂದೆ ಸಣ್ಣಪ್ಪರವರಿಗೆ ಮಾರಾಟ ಮಾಡಿದ ಜಮೀನು ಎಂದು ನಮೂದಿಸಿದೆ ಎಂದರೆ ಸರಿ. ದಿನಾಂಕಃ16.01.1966 ರಲ್ಲಿ ಕೊಂಡಿರುವ ಜಮೀನಿನ ಚೆಕ್ಕುಬಂದಿಯನ್ನು ಈ ದಾವಾಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ಜಮೀನಿಗೆ ಸಂಬಂಧಿಸಿದಂತೆ ಒಂದು ಕ್ರಯಪತ್ರ ಮತ್ತು ಪಹಣಿಪತ್ರಿಕೆಯನ್ನು ಬಿಟ್ಟು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಉಳಿದ ದಾಖಲೆಗಳು ಬ್ಯಾಂಕಿನಲ್ಲಿವೆ ಎನ್ನುತ್ತಾರೆ.

4) 1974 ನೇ ಇಸವಿಯಲ್ಲಿ ತಿಮ್ಮಮ್ಮರವರು ಸರ್ವೆ ನಂ.229/1 ಮತ್ತು 229/3 ರಲ್ಲಿನ 5 ಎಕರೆ 35 ಗುಂಟೆ ಜಮೀನನ್ನು ಸಣ್ಣಪ್ಪರವರಿಂದ ಕುಟುಂಬದವರಿಂದ ಕ್ರಯಕ್ಕೆ ಕೊಂಡಿದ್ದರು ಎಂದರೆ ಸರಿ. ಈ 5 ಎಕರೆ 35 ಗುಂಟೆ ಜಮೀನಿನಲ್ಲಿ ಪ್ರತಿವಾದಿಯ ತಂದೆ 2 ಎಕರೆ ಹಾಗೂ ನನ್ನ ತಂದೆ 3 ಎಕರೆ 35 ಗುಂಟೆ ಜಮೀನನ್ನು ಕ್ರಯಕ್ಕೆ ಕೊಂಡಿದ್ದರು ಎಂದರೆ ಸರಿ. ತಿಮ್ಮಮ್ಮರವರಿಂದ ಕ್ರಯಕ್ಕೆ ಕೊಂಡ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ತಿಮ್ಮಮ್ಮರವರು ನನ್ನ ತಂದೆಗೆ ಮಾರಾಟ ಮಾಡಿದ ಕ್ರಯಪತ್ರದಲ್ಲಿ ಸರ್ವೆ ನಂ229 ರಲ್ಲಿ ಪೋಡುಗಳನ್ನು ನಮೂದಿಸದೇ ಕೇವಲ ಸರ್ವೆ ನಂ.229 ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ಅವರು ನಮಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ತಿಮ್ಮಮ್ಮರವರು

ನಮ್ಮ ತಂದೆಗೆ ಮತ್ತು ಪ್ರತಿವಾದಿಯ ತಂದೆಗೆ ಜಮೀನನ್ನು ಮಾರಾಟ ಮಾಡಿದ್ದು, ಆ ಕ್ರಯಪತ್ರಗಳ ಚೆಕ್‌ಬಂದಿಗಳಲ್ಲಿ ನಾವು ಮತ್ತು ಪ್ರತಿವಾದಿಯರು ಇದ್ದೇವೆ ಎಂದರೆ ಸಾಕ್ಷಿ ನಾವು ಇದ್ದೇವೆ ಪ್ರತಿವಾದಿಗಳು ಇಲ್ಲ ಎನ್ನುತ್ತಾರೆ. ನಾವು ಮತ್ತು ಪ್ರತಿವಾದಿಗಳು ಕ್ರಯಪತ್ರದಲ್ಲಿನ ಚೆಕ್‌ಬಂದಿಗಳ ಪ್ರಕಾರ ಸ್ವಾಧೀನದಲ್ಲಿದ್ದು ಪೋಡುಗಳ ವ್ಯತ್ಯಾಸವಿದೆ ಎಂದು ಈ ದಾವೆಯ ಪ್ರತಿವಾದಿಯರು ಅಸಲು ದಾವಾ ಸಂಖ್ಯೆ 07/2013ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 07/2013ರಲ್ಲಿನ ಆದೇಶವಾದ ನಂತರ ಕಂದಾಯ ಅಧಿಕಾರಿಗಳು ಪೋಡುಗಳನ್ನು ಸರಿಪಡಿಸಿ ಈ ಪ್ರತಿವಾದಿಗಳು ಸರ್ವೆ ನಂ.229/1 ರಲ್ಲಿನ ಎರಡು ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ.

5) ನಾವು ಸರ್ವೆ ನಂ.229/3ರಲ್ಲಿ 3 ಎಕರೆ 35 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ ಎಂದು ಕಂದಾಯಾಧಿಕಾರಿಗಳು ಪೋಡುಗಳನ್ನು ಸರಿಪಡಿಸಿದ್ದಾರೆ ಎಂದರೆ ಸಾಕ್ಷಿ ಕ್ರಯಪತ್ರದ ಪ್ರಕಾರ ನಮ್ಮ ಹೆಸರನ್ನು ಕೂರಿಸಿರುತ್ತಾರೆ ಎನ್ನುತ್ತಾರೆ. ಸರ್ವೆ ನಂ.229/1ರಲ್ಲಿ ಎರಡು ಎಕರೆ ಜಮೀನು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನಮೂನೆ 5-6 ಮತ್ತು ಕೈ ಬರಹ ಪಹಣಿ ಪತ್ರಿಕೆಗಳು ಹಾಗೂ ಇತರೆ ಕಂದಾಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಿಮ್ಮಮ್ಮರವರು ಮಾರಾಟ ಮಾಡಿದ ಸ್ವತ್ತಿನ ಪೋಡುಗಳಲ್ಲಿ ವ್ಯತ್ಯಾಸವಾಗಿದೆ ಎಂದು ಸದರಿ ತಿಮ್ಮಮ್ಮರವರು ದಿನಾಂಕಃ11.02.2000 ರಂದು ಪೋಡುಗಳ ವ್ಯತ್ಯಾಸ ಕುರಿತು ತಿದ್ದುಪಡಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗಾಗಲೇ ಸರ್ವೆ ನಂ.229 ರಲ್ಲಿನ ಪೋಡುಗಳಲ್ಲಿನ ವ್ಯತ್ಯಾಸ ಸರಿಪಡಿಸಿದ್ದರೂ ಕೂಡ ಹಾಗೂ ಈ ಸ್ವತ್ತುಗಳ ಸಂಬಂಧ ಈಗಾಗಲೇ ತೀರ್ಮಾನವಾಗಿದ್ದರೂ ಸಹ, ಈ ದಾವೆಯಲ್ಲಿ ಆ ಎಲ್ಲಾ ಮಾಹಿತಿಯನ್ನು ಮರೆ ಮಾಚಿ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.